Sri A. SHANKARA ALVA (Minister for Co-operation).—Madam Speaker, I beg to introduce:

The Mysore Agricultural Debtors' (Temporary Protection) Bill 1973

MADAM SPEAKER: The Mysore Agricultural Debtors' (Temporary Protection) Bill 1973 Introduced.

Mysore V. P. and L. B. (Amend.) Bill 1973, introduction of

Sri M. MALLIKARJUNA SWAMY.— (Minister for Community Development and Social Welfare).—Madam Speaker, I beg to introduce

The Mysore Village Panchayat and Local Boards (Amendment Bill, 1973.

MADAM SPEAKER—The Mysore Village Panchayats and Loca Boards (Amendment) Bill, 1973 is introduced.*

The Criminal Law and Indentification of Prisoners (Mysore Extn. and Amend.) Bill 1973, intro duction of

Sri R. D. KITTUR (Minister of State for Home).—Madam Speaker I beg to introduce:

The Criminal Law and Identification of Prisoners (Mysore Extension and Amendment) Bill, 1973.

MADAM SPEAKER.— The Criminal Law and Identification of Prisoners (Mysore Extension and Amendment) Bill, 1973 is introduce.

Relief Measures taken by Government in droght Areas

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಸನ್ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಲಿಕ್ಕೆ ಅಪೇಕ್ಷೆಪಡುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಬಹಳ ಭೀಕರವಾಗಿದೆ. ಅಲ್ಲಿಯ ಜನ ದಾರುಣ ಸ್ಥಿತಿಯಲ್ಲಿದ್ದಾರೆ. ಅಂತಹ ಸ್ಥಿತಿಯಲ್ಲಿ ನಮ್ಮ ರಾಜ್ಯದ ಮುಖಂಡರು ಮತ್ತು ಅಕ್ಕಪಕ್ಕದ ನಾಲ್ಕು ರಾಜ್ಯಗಳ ಕಾಂಗ್ರೆಸ್ ಶಾಸಕರು ಇಲ್ಲಿ ಸೇರುವ ಯೋಜನೆ ಏನು ಕೈಗೊಂಡಿದ್ದಾರೆ, ಅದರಿಂದ ಯಾವ ರೀತಿ ಜನರಿಗೆ ಪ್ರಯೋಜನವಾಗುತ್ತದೆ ಎನ್ನುವ ಬಗ್ಗೆ ಸರ್ಕಾರದವರು ವಿವರಣೆ ಕೊಡಬೇಕು. ಸಮತಾವಾದವನ್ನು ಹೇಳತಕ್ಕವರು, ಬಡವರನ್ನು ಉದ್ಧಾರ ಮಾಡತಕ್ಕವರು.

ಅಧ್ಯಕ್ಷರು :—ತಾವು ಆ ರೀತಿ ಎದ್ದು ಹೇಳಿಬಿಟ್ಟರೆ ಅದರ ಸ್ವಾರಸ್ಯ ಹೋಗಿಬಿಡುತ್ತದೆ. ಬರೆದು ಕಳಿಸಿ, ಆಮೇಲೆ ಯೋಚನೆ ಮಾಡೋಣ.

ಶ್ರೀ ಹೆಚ್. ಡಿ. ದೇವೇಗೌಡ :—ನಾಳೆ ಮಧ್ಯಾಹ್ನ ಬಹಳ ಜನರು ಬಂದು ಸೇರುತ್ತಾರೆ. ಸುಮಾರು 10 ಲಕ್ಷ ರೂಪಾಯಿ ವೆಚ್ಚದಲ್ಲಿ ಸೊಗಸಾದ ಮೇಳ ವಿರ್ಪಾಡಾಗಿದೆ. ಈಗ ರಾಜ್ಯದಲ್ಲಿ ಬರಗಾಲ ಇದೆ. ಆದುದರಿಂದ ಇದು ಆಗಬಾರದಾಗಿತ್ತು. ಈ ಸಮ್ಮೇಳನ

*Bills appended as annexures to this volume.

ಮಾಡುವುದಕ್ಕೋಸ್ಕರ 8 ದಿವಸ ಅಸೆಂಬ್ಲಿ ಅಡ್ಜರ್ನ್ ಮಾಡಬಾರದಾಗಿತ್ತು. ಇದು ವಿಷಾದಕರವಾದ ವಿಷಯ. ರಾಜ್ಯದಲ್ಲಿ ಬಿಕ್ಕಟ್ಟು ಪರಿಸ್ಥಿತಿ ಇರುವ ಕಾಲದಲ್ಲಿ ಈ ಮೇಳ ನಡೆಸುವುದು, ಪ್ರದರ್ಶನ ನಡೆಸುವುದು ಅಷ್ಟು ಯೋಗ್ಯವಾದುದಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :—ಬೆಂಗಳೂರಿನಲ್ಲಿ ನಾಳೆಯಿಂದ ಕಾಂಗ್ರೆಸ್ ಅಧಿವೇಶನ ನಡೆಯುತ್ತದೆ. ಅದಕ್ಕೆ ಎಷ್ಟು ಆಹಾರ ಓದಗಿಸಿದ್ದಾರೆ, ಎಷ್ಟು ಕೋಳಿಗಳು, ಎಷ್ಟು ಕುರಿಗಳನ್ನು ಒದಗಿಸಿದ್ದಾರೆ ಎಂಬುದು ಗೊತ್ತಿಲ್ಲ. ಬರಗಾಲ ಪ್ರದೇಶದಲ್ಲಿ ಅನ್ನ ಇಲ್ಲ ಎಂದು ಜನ ಸಾಯುತ್ತಿದ್ದಾರೆ. ಶ್ರೀಮಾನ್ ಚಿನ್ನಬಸಪ್ಪನವರು ಅಲ್ಲಿಗೆ ಆಹಾರ ಧಾನ್ಯ ಕಳುಹಿಸಿರುವ ಬಗ್ಗೆ ರಿಪೋರ್ಟ್ ಕೊಟ್ಟಿದ್ದಾರೆ. ಅದು ಅಲ್ಲಿಗೆ ತಲುಪಿದೆಯೋ ಇಲ್ಲವೋ ಗೊತ್ತಿಲ್ಲ. ನಾಳೆ ನೂರಾರು ಜನರು ಇಲ್ಲಿ ಬರುತ್ತಾರೆ. ಗ್ಲಾಸ್ ಹೌಸ್ ಇಂದ್ರನ ಅರಮನೆಯಂತೆ ತಯಾರಾಗುತ್ತಿದೆ. ಈ ಸಮ್ಮೇಳನಕ್ಕೆ ಯಾವ ಸೋರ್ಸ್‌ನಿಂದ ಗೋಧಿ ಮತ್ತು ಅಕ್ಕಿ ತಂದಿರಿ ? ಈ ಸಭೆಯನ್ನು 4 ದಿವಸ ಮುಂದಕ್ಕೆ ಹಾಕುತ್ತಾ ಇರತಕ್ಕ ಉದ್ದೇಶವೇನು ? ಈ ಸಮ್ಮೇಳನಕ್ಕೆ ಎಷ್ಟು ಹಣವನ್ನು ಯಾವ ಯಾವ ಕೈಗಾರಿಕೋದ್ಯಮಿಗಳಿಂದ ಎಲ್ಲೆಲ್ಲಿ ತಂದಿದ್ದೀರಿ ? ಚಪ್ಪರದ ವ್ಯವಸ್ಥೆಗೆ ಒಬ್ಬರು, ಊಟದ ವ್ಯವಸ್ಥೆಗೆ ಒಬ್ಬರು, ಮೆಲಗಡೆ ವ್ಯವಸ್ಥೆಗೆ ಒಬ್ಬರು ಅಂಥ ಒಂದು ದೊಡ್ಡ ಲಿಸ್ಟ್ ಇದೆ. ಇಂತಹ ಬರಗಾಲದ ಸಮಯದಲ್ಲಿ ದಕ್ಷಿಣ ಪಲಯದಿಂದ ಜನರನ್ನು ಕರೆದುಕೊಂಡು ಬಂದು ಈ ವೈಭವದ ಸಮಾರಂಭ ನಡೆಸುವುದರ ಔಚಿತ್ಯವಾದರೂ ಏನು ? ದಯಮಾಡಿ ಇದನ್ನು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳಬೇಕು ಎಂದು ಕೇಳಿ ಕೊಳ್ಳುತ್ತೇನೆ.

Budget estimates for 1973–74. Demands for grants. Demands Nos. 3, 10, 12, 13, 15 B, 35 and 36.

ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬೀಹಾಳ್) :—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ನಾನು ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಈಗ ಹಿಂದುಳಿದ ಮತ್ತು ಹರಿಜನರ ಉದ್ಧಾರವಾಗಬೇಕಾದರೆ, ಈ ಜನರಿಗೆ ನೌಕರಿ ಸವಲತ್ತು ಸಿಕ್ಕಬೇಕಾದರೆ, ಅದರಲ್ಲಿ ಮುಖ್ಯವಾಗಿ ಗ್ರಾಮಾಂತರದಲ್ಲಿರತಕ್ಕ ಹರಿಜನರ ಮತ್ತು ಹಿಂದುಳಿದವರ ಅಭಿವೃದ್ಧಿಯಾಗಬೇಕಾದರೆ ನೌಕರಿ ಕೊಡತಕ್ಕ ನೀತಿಯಲ್ಲಿ ಬದಲಾವಣೆ ಆಗಬೇಕು ಎಂದು ಹೇಳಬಯಸುತ್ತೇನೆ. ಆಯಾಯ ವಿಭಾಗದಲ್ಲಿ ಇರತಕ್ಕ ಗ್ರಾಮಾಂತರದ ಜನರಿಗೆ, ಹಿಂದುಳಿದವರಿಗೆ, ಹರಿಜನರಿಗೆ ನೌಕರಿ ಕೊಡಲಿಕ್ಕೆ ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿ ಎಂದು ಹೇಳಿ ಸ್ಥಾಪನೆಯಾಗಿತ್ತು. ನನಗೆ ಗೊತ್ತಿದ್ದಂತೆ ಅದು ರದ್ದು ಆಗಿದೆ. ನಿಜಕ್ಕೂ ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿ ನೇಮಕವಾದರೆ ಯೋಗ್ಯವಾಗುತ್ತದೆ. ಇದರಿಂದ ಆಯಾಯ ಭಾಗದಲ್ಲಿ ಇರತಕ್ಕ ಒಕ್ಕಲು ಮಕ್ಕಳಿಗೆ, ಹರಿಜನರಿಗೆ, ಹಿಂದುಳಿದವರಿಗೆ ಫಾಯಿದೆಯಾಗುತ್ತದೆ ಎಂದು ಹೇಳುತ್ತೇನೆ. ನಾವೆಲ್ಲ ಸಮತಾವಾದದ ಮಾತು ಹೇಳುವವರು. ಗರೀಬಿ ಹಠಾವೋ ಘೋಷಣೆ ಮಾಡುವವರು. ಹರಿಜನರು ಹಿಂದುಳಿದವರನ್ನು ಮೇಲಕ್ಕೆ ತರಬೇಕು ಎನ್ನುವವರು. ಈ ಒಂದು ಆಕಾಂಕ್ಷೆ ಇರುವಾಗ ಆಯಾಯ ಭಾಗದ ಜನರಿಗೆ, ಆಯಾ ಭಾಗದ ಹಿಂದುಳಿದವರಿಗೆ ನೌಕರಿಗಳ ಸವಲತ್ತು ಸಿಕ್ಕಬೇಕಾದರೆ ಡಿವಿಜನಲ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ನೇಮಕ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಈಗಿರುವಂತೆ ಸ್ಟೇಟ್ ರೆಕ್ರೂಟ್‌ಮೆಂಟ್ ಕಮಿಟಿ ಮಾಡುವುದಾದರೆ ಸರ್ಕಾರಕ್ಕೆ ಹೆಚ್ಚು ಖರ್ಚು ಆಗುತ್ತದೆ. ಸ್ಟೇಟ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿ ಬೆಳಗಾಂ, ಬೀದರ್ ಮತ್ತು ಮೈಸೂರು ವಿಭಾಗಗಳಿಗೆ ಹೋಗಿ ಉಮೇದುವಾರರ ಸಂದರ್ಶನ ತೆಗೆದುಕೊಂಡು ಬರುವುದರಿಂದ ಅಲ್ಲಿನ ಜನರಿಗೆ ಲಾಭ ಮಾಡಿಕೊಟ್ಟಂತಾಗುವುದಿಲ್ಲ.